# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 61 ಪ್ರಾ.ಸಾ. : 45**

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ವೆಂಕಟೇಶ |
| ತಂದೆಯ ಹೆಸರು | : | ರಾಮಕೃಷ್ಣಪ್ಪ |
| ವಯಸ್ಸು | : | 52 ವರ್ಷ |
| ಕೆಲಸ | : | ಅಸೋಸಿಯೇಟ್ ಪ್ರೊಪೆಸರ್, ಚಿಕ್ಕಬಳ್ಳಾಪುರ ವೈದ್ಯಕೀಯ ಮಹಾವಿದ್ಯಾಲಯ, |
| ವಾಸ | : | ಚಿಕ್ಕಬಳ್ಳಾಪುರ |

**ದಿನಾಂಕಃ 30-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಅಕ್ಟೋಬರ್ 2018 ರಿಂದ ಪೆಬ್ರುವರಿ 2023 ವರೆಗೆ ನಾನು ಕಾರವಾರ ಕ್ರಿಮ್ಸ ಆಸ್ಪತ್ರೆಯಲ್ಲಿ ತಜ್ಞ ವೈದ್ಯಾಧಿಕಾರಿಯಾಗಿ ಹಾಗೂ ಆರ್ ಎಮ್ ಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನ್ಯಾಯಾಲಯದ ಅದೇಶದ ಮೇರೆಗೆ ಪೊಲೀಸರು ನನಗೆ ಈ ಪ್ರಕರಣದ ಮೃತನ ತಾಯಿಯಾದ ಸರೋಜನಿ ನಾಯರ್ ರವರ ರಕ್ತ ಮಾದರಿಯನ್ನು ಸಂಗ್ರಹಿಸಿ ನೀಡುವಂತೆ ಕೋರಿಕೊಂಡ ಮೇರೆಗೆ ನಾನು ದಿನಾಂಕಃ16.11.2018 ರಂದು ಕಾರವಾರದ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಪೊಲೀಸರು ಹಾಜರುಪಡಿಸಿದ ಮೃತನ ತಾಯಿಯಾದ ಸರೋಜನಿ ನಾಯರ್ ರವರ ರಕ್ತ ಮಾದರಿಯನ್ನು ಡಿಎನ್ಎ ಸಲುವಾಗಿ ಇಡಿ ಟ್ಯೂಬ್‌ನಲ್ಲಿ ಸಂಗ್ರಹಿಸಿ ಪೊಲೀಸರಿಗೆ ನೀಡಿರುತ್ತೇನೆ. ರಕ್ತದ ಮಾದರಿಯನ್ನು ಸಂಗ್ರಹಿಸಿದ ಬಗ್ಗೆ ಐಡೆಂಟಿಪಿಕೇಷನ್ ಫಾರ್ಮನಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

3. ಆಸ್ಪತ್ರೆಯಲ್ಲದೇ ಇನ್ನಿತರೇ ಸ್ಥಳದಲ್ಲಿ ರಕ್ತದ ಮಾದರಿಯನ್ನು ಸಂಗ್ರಹಿಸಿದರೆ ಅದು ದೂಷಿತ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಂಗ್ರಹಿಸಿದ ರಕ್ತದ ಮಾದರಿಯು ದೂಷಿತ ಆಗದೇ ಇರುವ ಬಗ್ಗೆ ಸುರಕ್ಷಿತಾ ಕ್ರಮ ವಹಿಸಿದ್ದೀರಾ ಎಂದರೆ ಸಾಕ್ಷಿಯು ರಕ್ತದ ಮಾದರಿಯನ್ನು ಇಡಿ ಟ್ಯೂಬ್ ನಲ್ಲಿ ತೆಗೆದಿರುವುದೇ ಸುರಕ್ಷಿತ ಕ್ರಮ ಎಂದು ನುಡಿಯುತ್ತಾರೆ. ರಕ್ತದ ಮಾದರಿಯನ್ನು ಸಂಗ್ರಹಿಸಲು ಬಳಸಿದ ಇಡಿ ಟ್ಯೂಬ್ sterilize ಆಗಿದ್ದ ಬಗ್ಗೆ ಪರೀಕ್ಷೆ ಮಾಡಿಕೊಂಡಾರಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಕಂಡು ಬರುವುದಿಲ್ಲ ಹಾಗೂ ಸದರಿ ಟ್ಯೂಬ್‌ಗಳನ್ನು ನೇರ ಕಂಪನಿಗಳಿಂದ ತರಿಸಿಕೊಳ್ಳಲಾದ ಬಳಸದೇ ಇರುವ ಹೊಸ ಟ್ಯೂಬ್‌ಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಟ್ಯೂಬ್‌ಗಳಿಗೆ ಹಾಕಿದ್ದ ಕ್ಯಾಪ್ ಪಿಂಕ್ ಮಿಶ್ರಿತ ಬಣ್ಣದಾಗಿರುತ್ತದೆ. ನಾನು ಯಾವುದೇ ರಕ್ತದ ಮಾದರಿಯನ್ನು ಇಡಿ ಟ್ಯೂಬ್‌ನಲ್ಲಿ ಸಂಗ್ರಹಿಸಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

4. ರಕ್ತದ ಮಾದರಿಯನ್ನು ಸಂಗ್ರಹಿಸುವ ಪೂರ್ವದಲ್ಲಿ ಸರೋಜನಿ ನಾಯರ್ ರವರ ಅನುಮತಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನ್ಯಾಯಾಲಯದ ಆದೇಶದಂತೆ ರಕ್ತದ ಮಾದರಿಯನ್ನು ಸಂಗ್ರಹಿಸಿರುತ್ತೇನೆ. ಸರೋಜನಿ ನಾಯರ್ ರವರ ಗುರುತಿನ ಚೀಟಿಯನ್ನು ನಾನು ಪರಿಶೀಲಿಸಿರುವುದಿಲ್ಲ. ನ್ಯಾಯಾಲಯದಿಂದ ಅದೇಶ ಯಾವಾಗ ಬಂದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಆ ವಿಷಯವು ಡಿಸ್ಟ್ರಿಕ್ಟ ಸರ್ಜನ್‌ರವರಿಗೆ ತಿಳಿದಿರುತ್ತದೆ. ನಾನು ದಿಃ 16.11.2018 ರಂದು ನ್ಯಾಯಾಲಯದಲ್ಲಿ ಎಷ್ಟು ಗಂಟೆಗೆ ರಕ್ತದ ಮಾದರಿಯನ್ನು ಸಂಗ್ರಹಿಸಿರುತ್ತೇನೆ ಎಂದು ನೆನಪಿರುವುದಿಲ್ಲ. ಒಂದು ರಕ್ತದ ಮಾದರಿಯನ್ನು ಸಂಗ್ರಹಿಸಿದ ನಂತರ ಎಷ್ಟು ಗಂಟೆಯ ಅವಧಿಯ ಒಳಗೆ ಪರೀಕ್ಷೆಗೆ ಯೋಗ್ಯವಾಗಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–9 ಫಾರ್ಮನ್ನು ಪೊಲೀಸರೇ ತುಂಬಿದ್ದು, ಅದರಲ್ಲಿರುವ ಇಡಿಟಿ ಹಾಗೂ ಫ್ರೆಶ್ ಬ್ಲಡ್ ಕಾಲಂನ್ನು ನಾನು ತುಂಬಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ–9 ಫಾರ್ಮನಲ್ಲಿ ನ್ಯಾಯಾಧೀಶರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಪೊಲೀಸರೇ ಸೃಷ್ಟಿಸಿಕೊಂಡು ತಂದ ಫಾರ್ಮಗೆ ನಾನು ಸಹಿ ಮಾಡಿ ಸೀಲ್ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ